

# ಅನುಭವದ ಮುತ್ತು

ಬದುಕಿನುದ್ದದ ಬವಣೆಗಳ
ಎಳೆಗಟ್ಟಿ ದಾರ ಮಾಡಿನಿ
ಅನುಭವದ ಮುತ್ತುಗಳ
ಅಣಿಮಾಡಿ ಜೋಡಿಸಿಟ್ಟೇನಿ
ಮತ್ತಿಲ್ಲ ಈ ಬಣ್ಣ ಬಣ್ಣದ
ಮುತ್ತಿನ ಮನದೊಳಗ
ಸುತ್ತೆಲ್ಲ ಈ ಅಂದ ಚೆಂದದ
ಅರಗಿಣಿಯ ಗುಣದೊಳಗ
ರತಿಯರ ಕೊರಳೇರಿ ಬೇಸರವ
ನೀಗಿ ನಸು ನಗಿಸತಾವ
ಲಲನೆಯರ ಕಡುಗೆಂಪ ಕೋಪವ
ತಣಿಸಿ ತನು ಸಿಂಗರಿಸತಾವ
ಮಂಜಾದ ಕಣ್ಣೊಳಗ
ಮಣಿಮಾಗಿ ಮುತ್ತಾತು
ಸ್ವಾವಲಂಬದಿ ನಿಂತಾಗ
ಇಳಿಸಂಜೆ ಹೊತ್ತಾತು
ಮುತ್ತೊಳಗ ಮನಿಮಾಡಿ
ಗತ್ತಾಗಿ ಕುಂತೀನಿ
ಧ್ಯಾನಕ್ಕೂ ಜಪಮಾಡಿ
ಜಗಲೀಯ ಕಟ್ಟೇನಿ
ಈ ಜಗದ ಜನರೆಲ್ಲ
ಬಣ್ಣ ಬಣ್ಣದ ಮಣಿಯಂಗ
ಜಾತಿ ಧರ್ಮವ ಮರೆತು
ಬೆರಿಬೇಕ ಮುತ್ತಿನ ಹಾರದಂಗ

● **ಸಂಗಮಸುತ ಗುರು ಗಾಣಿಗೇರ**

# ಮಣಿಯೇ ಪೂರ!

ಮಣಿಸರಗಳ
ಅಣಿಗೊಳಿಸಿ ಕುಳಿತಿದ್ದೇನೆ
ಕಾಣಿಸಿತಾ ಮಹಾಜನಗಳೇ

ಮಣಿಪುರದ
ಮಣಿಗಳನೊಂದೊಂದೇ
ಪೋಣಿಸಿ
ಕುಣಿಕೆ ಬಿಗಿದು
ದಣಿದು ಕುಳಿತಿದ್ದೇನೆ ಕಾದು
ಬೋಣಿ ಯಾರದೆಂದು

ಹಣಿಯ ಬಂದವರೆದುರು
ಮಣಿಯದೇ ಗು–
ರಾಣಿ ಹಿಡಿದಿದ್ದೇನೆ
ತಣಿಸಲೆತ್ನಿಸದಿರಿ ಬರಿಯ
ಗಿಣಿಮಾತುಗಳಿಂದ

ರಾಣಿಯಲ್ಲ ನಾ, ನನಗೆ
ವಾಣಿ ಒಲಿದಿಲ್ಲ ನಿಜ
ಎಣಿಕೆ ಗೊತ್ತು ಏಮಾರದಷ್ಟು
ಉಣಿಸಿ ಬೆಳೆಸಿಯೇ ತೀರುವೆ ಕರುಳ
ಕುಡಿಯನ್ನು!

● **ತಲಕಾಡು ಶ್ರೀನಿಧಿ**